ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ : 6ನೇ ಜುಲೈ, 2016

ಸಂಖ್ಯೆ: 224

14ನೇ ವಿಧಾನ ಸಭೆಯ ಸದಸ್ಯರ ಹೆಸರು, ಕ್ಷೇತ್ರ, ವಿದ್ಯಾರ್ಹತೆ, ಭಾವಚಿತ್ರ, ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಒಳಗೊಂಡ **"14ನೇ ವಿಧಾನ ಸಭೆ ಸದಸ್ಯರ ಸಂಕ್ಷಿಪ್ತ ವ್ಯಕ್ತಿ ಪರಿಚಯ"** (ಪಾಕೆಟ್ ಡೈರಿ) ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ ವತಿಯಿಂದ ತಯಾರಿಸಿರುವ ಕಿರುಹೊತ್ತಿಗೆಯನ್ನು ಈಗಾಗಲೇ ಮಾನ್ಯ ಸದಸ್ಯರ ಉಪಯೋಗಕ್ಕಾಗಿ ವಿತರಿಸಲಾಗಿದೆ. ಸದರಿ ಕಿರುಹೊತ್ತಿಗೆಯ **ಎರಡನೇ ಸಂಪುಟವನ್ನು** ಮುದ್ರಿಸಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈಗ ಪ್ರಕಟಿಸಿರುವ ಕಿರುಹೊತ್ತಿಗೆಯಲ್ಲಿ ತಪ್ಪುಗಳಿದ್ದಲ್ಲಿ ಅಥವಾ ಬದಲಾವಣೆ ಮಾಡಬೇಕಾಗಿದ್ದಲ್ಲಿ, ಭಾವಚಿತ್ರಗಳನ್ನು ಬದಲಾಯಿಸಬೇಕಾಗಿದ್ದಲ್ಲಿ ಹಾಗೂ ಕಿರುಹೊತ್ತಿಗೆಯನ್ನು ಇನ್ನಷ್ಟು ಉತ್ತಮ ಪಡಿಸಲು ಅಗತ್ಯ ತಿದ್ದುಪಡಿಗಳನ್ನು/ಅಭಿಪ್ರಾಯಗಳನ್ನು ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ, ಕೊಠಡಿ ಸಂಖ್ಯೆ:19, ನೆಲಮಹಡಿ, ವಿಧಾನಸೌಧ, ಬೆಂಗಳೂರು, ಇಲ್ಲಿಗೆ ಲಿಖಿತ ಮೂಲಕ ನೀಡಬೇಕೆಂದು ಈ ಮೂಲಕ ಮಾನ್ಯ ಸದಸ್ಯರನ್ನು ಕೋರಲಾಗಿದೆ. **ಈಗಾಗಲೇ ಪ್ರಕಟಿಸಿರುವ ಕಿರುಹೊತ್ತಿಗೆಯು** ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯಲ್ಲಿ ಲಭ್ಯವಿರುತ್ತದೆ.

ಎಸ್. ಮೂರ್ತಿ,
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರಿಗೆ.